# ಆ್ಯಪ್‌ಗಳ ಪರಿಸರ ಸೇವೆ



ತಂತ್ರಜ್ಞಾನ ನಮ್ಮ ಕೆಲಸವನ್ನು ಸಲೀಸಾಗಿಸುವುದರ ಜೊತೆಗೆ ಅನೇಕ ವಿಚಾರಗಳಲ್ಲಿ ಪರಿಸರಸ್ನೇಹಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಲಭ್ಯವಿರುವ ಹಲವಾರು ಆ್ಯಪ್‌ಗಳನ್ನು ಸಮಗ್ರವಾಗಿ ಬಳಸುವುದರಿಂದ ನಿತ್ಯದ ಜೀವನ ಕ್ರಮ ಮತ್ತಷ್ಟು ಸಲೀಸಾಗುವುದರ ಜೊತೆಗೆ ಪರಿಸರಕ್ಕೂ ಪೂರಕವಾಗಲಿವೆ. ಮನೆ, ಕೆಲಸದ ಸ್ಥಳದಲ್ಲಿ, ಆಫೀಸ್‌ನಲ್ಲಿ ಹೆಚ್ಚೆಚ್ಚು ನೆರವಾಗುವ ಕೆಲ ಆ್ಯಪ್, ಟೂಲ್‌ಗಳ ಪರಿಚಯ ಇಲ್ಲಿದೆ.

## ಫೈಲ್ ಸಿಂಕಿಂಗ್ ಸರ್ವೀಸ್

ಕಾಗದರಹಿತ ಕೆಲಸದ ನಿರ್ವಹಣೆಗೆ 'ಫೈಲ್ ಸಿಂಕಿಂಗ್ ಸರ್ವಿಸ್' ಅತ್ಯುತ್ತಮ ಟೂಲ್ ಆಗಿದೆ. ನಿತ್ಯವೂ ಹೆಚ್ಚಾಗಿ ಬಳಸುವ ಡಿವೈಸ್ ಅಥವಾ ಜೊತೆಯಲ್ಲಿಯೇ ಹೆಚ್ಚಾಗಿ ಇಟ್ಟುಕೊಳ್ಳುವ ಸ್ಮಾರ್ಟ್ ಡಿವೈಸ್‌ನಲ್ಲಿ, ಎಲ್ಲ ರೀತಿಯ ಡಿಜಿಟಲ್ ಡಾಕ್ಯುಮೆಂಟ್‌ಗಳು ಲಭ್ಯವಾಗಲು ಈ ಸೇವೆ ಬಳಸುವುದು ಸೂಕ್ತ. ಈ ಟೂಲ್‌ಗಳು ನಿಮ್ಮ ಬಳಿ ಇರುವ ಡಿವೈಸ್‌ಗಳಲ್ಲಿ ಆಫ್‌ಲೈನ್‌ನಲ್ಲೂ ಉಳಿಸಿಕೊಳ್ಳಲು ನೆರವು ನೀಡುತ್ತವೆ. ಇದರಿಂದಾಗಿ ನೀವು ತುರ್ತು ಪರಿಸ್ಥಿತಿಯಲ್ಲೂ ನಿಮ್ಮ ಎಲ್ಲ ಮಹತ್ವದ ದಾಖಲೆಗಳನ್ನು ಬೆರಳ ತುದಿಯಲ್ಲೇ ಪಡೆಯಬಹುದು. ಬಾಕ್ಸ್, ಡ್ರಾಪ್ ಬಾಕ್ಸ್, ಗೂಗಲ್ ಡ್ರೈವ್‌ನಂಥ ಆ್ಯಪ್‌ಗಳು ಅತ್ಯುತ್ತಮ ಫೈಲ್ ಸಿಂಕಿಂಗ್ ಸೇವೆಯನ್ನು ಒದಗಿಸುತ್ತವೆ.

## ಡಾಕ್ಯುಮೆಂಟ್ ಷೇರಿಂಗ್ ಟೂಲ್

ಇ–ಮೇಲ್ ಜೊತೆಗೆ ಡಾಕ್ಯುಮೆಂಟ್ ಫೈಲ್‌ಗಳು, ಫೋಟೊಗಳು ಹಾಗೂ ವಿಡಿಯೊಗಳನ್ನೂ ಕಳುಹಿಸುವುದುಂಟು. ಈ ವಿಧಾನದಲ್ಲಿ ಪ್ರತಿ ಸಾರಿ ಬಳಕೆದಾರರು ಫೈಲ್‌ಗಳನ್ನು ರವಾನಿಸಿದಾಗ ಅಥವಾ ಪಡೆದುಕೊಂಡಾಗ, ಆ ಬಗ್ಗೆ ಸಂಬಂಧಪಟ್ಟವರಿಗೆ ತಿಳಿಸಲಾಗದು. ಅದರ ಬದಲು ಡಿಜಿಟಲ್ ಫೈಲ್‌ಗಳನ್ನು ಕಳುಹಿಸಲು ಕ್ಲೌಡ್ ಬೇಸ್ಡ್ ಆಧಾರಿತ ಆ್ಯಪ್‌ಗಳನ್ನು ಬಳಸುವುದು ಸೂಕ್ತ. ದೊಡ್ಡ ಗಾತ್ರದ ಫೈಲ್‌ಗಳು, ಡಾಕ್ಯುಮೆಂಟ್‌ಗಳನ್ನು ಇ–ಮೇಲ್ ಮಾಡುವುದು ಕಷ್ಟ. ಇಂತಹ ಪ್ರಕ್ರಿಯೆಗೆ ಡಾಕ್ಯುಮೆಂಟ್ ಷೇರಿಂಗ್ ಆ್ಯಪ್‌ಗಳನ್ನು ಬಳಸುವುದು ಸೂಕ್ತ.

## ಸ್ಕ್ಯಾನಿಂಗ್ ಆ್ಯಪ್

ಪತ್ರಗಳು, ಡಾಕ್ಯುಮೆಂಟ್ಸ್, ಸರ್ಟಿಫಿಕೇಟ್‌ಗಳು ಇತ್ಯಾದಿಗಳನ್ನು ಡಿಜಿಟಲ್ ಕಡತಗಳನ್ನಾಗಿ ಪರಿವರ್ತಿಸಲು ಸ್ಕ್ಯಾನಿಂಗ್ ಆ್ಯಪ್‌ಗಳು ಅತ್ಯುತ್ತಮ ಪಾತ್ರ ವಹಿಸುತ್ತವೆ. ಫೋನ್ ಕ್ಯಾಮೆರಾವನ್ನೇ ಸ್ಕ್ಯಾನರ್ ರೀತಿಯಲ್ಲೂ ಬಳಸಬಹುದು. ಕೆಲ ಸ್ಕ್ಯಾನಿಂಗ್ ಆ್ಯಪ್‌ಗಳು ನೀವು ಸ್ಕ್ಯಾನ್ ಮಾಡುತ್ತಿರುವ ವಸ್ತುವಿನ ಅಂಚು ಶೋಧಿಸಿ, ಅದು ಯಾವ ವಸ್ತು ಎಂದು ಪತ್ತೆ ಹಚ್ಚುವ ಕಾರ್ಯಕ್ಷಮತೆಯನ್ನೂ ಹೊಂದಿವೆ. ಆಪ್ಟಿಕಲ್ ಕ್ಯಾರೆಕ್ಟರ್ ರೆಕೆಗ್ನೇಷನ್(ಒಸಿಆರ್) ತಂತ್ರಜ್ಞಾನದಿಂದ ನೀವು ಸ್ಕ್ಯಾನ್ ಮಾಡಿದ ನಿಮಿಷದಲ್ಲೇ ಅದರಲ್ಲಿರುವ ಪಠ್ಯವನ್ನೂ ಕಾಪಿ ಮಾಡಿ ಮತ್ತೊಂದು ಕಡತದಲ್ಲಿ ಪೇಸ್ಟ್ (ನಕಲು) ಮಾಡಬಹುದು. ಫೈನ್ ಸ್ಕ್ಯಾನರ್ ಪ್ರೊ ಮತ್ತು ಕ್ಯಾನ್‌ಬೋಟ್ ಪ್ರೊ ಸೇರಿದಂತೆ ಹಲವು ಆ್ಯಪ್‌ಗಳು ಈ ವಿಷಯದಲ್ಲಿ ಮುಂಚೂಣಿಯಲ್ಲಿವೆ.

## ಇ-ಸಿಗ್ನೇಚರ್ ಟೂಲ್

'ಇ–ಸಿಗ್ನೇಚರ್ ಟೂಲ್' ಕಾಗದ ಬಳಕೆಗೆ ಕಡಿವಾಣ ಹಾಕುತ್ತದೆ. ಕಾಗದ ಪತ್ರಗಳಿಗೆ ನಿಮ್ಮ ಸಹಿ ಅಗತ್ಯ. ಡಿಜಿಟಲ್ ರೂಪದ ಕಾರ್ಯಗಳಿಗೂ ನೀವು ನಿಮ್ಮ ಇ–ಸಿಗ್ನೇಚರ್ ಬಳಸಬೇಕಾಗುತ್ತದೆ. ಸಹಿಯನ್ನು ಡಿಜಿಟಲ್ ರೂಪಕ್ಕೆ ಬದಲಾಯಿಸಲು ಅಡೋಬ್ ರೀಡರ್, ಅಡೋಬ್ ಅಕ್ರೋಬಾಟ್, ಪ್ರೀವಿವ್ ಫಾರ್ ಮ್ಯಾಕ್ ಒಎಸ್ ಇತ್ಯಾದಿ ಆ್ಯಪ್‌ಗಳು ನೆರವು ನೀಡುತ್ತವೆ. ಇವು ಇ–ಸಿಗ್ನೇಚರ್ ರಚಿಸಲು ಅನುವು ಮಾಡಿಕೊಟ್ಟು ಅದನ್ನು ಕಡತಗಳಿಗೆ ಅನ್ವಯಿಸುವಂತೆ ಸಹಕರಿಸುತ್ತವೆ.

## ಟು ಡು ಲಿಸ್ಟ್

ಪೇಪರ್‌ನಲ್ಲಿ 'ಟು ಡು ಲಿಸ್ಟ್' ಮಾರ್ಕ್ ಮಾಡಿ ಅದನ್ನು ಪಾಲಿಸುವುದು ತ್ರಾಸದಾಯಕ. ಆದ್ಯತೆಗಳು ಬದಲಾದಂತೆಲ್ಲ ಪಟ್ಟಿಯನ್ನು ಮರು ಹೊಂದಿಸುವುದು ಕಿರಿಕಿರಿ. ಬದಲಿಗೆ 'ಟು ಡು ಲಿಸ್ಟ್' ಸೇವೆ ಬಳಸಿದರೆ ಅನುಕೂಲಕ್ಕೆ ತಕ್ಕಂತೆ ಯೋಜನೆ ರೂಪಿಸಿಕೊಳ್ಳಬಹುದು. ರಿಮೈಂಡರ್ ಸೆಟ್ ಮಾಡಿ, ಅದಕ್ಕೆ ಸಂಬಂಧಿಸಿದಂತೆ ಕಾಲ ಕಾಲಕ್ಕೆ ನೋಟಿಫಿಕೇಷನ್‌ಗಳನ್ನು ಪಡೆಯಬಹುದು. ಟು ಡು ಲಿಸ್ಟ್ ಪ್ರೀಮಿಯಂ, ಅಸಾನಾ, ಎನೀ ಇತ್ಯಾದಿ ಆ್ಯಪ್‌ಗಳಿವೆ.

■ **ಶಶಿಕುಮಾರ್ ಸಿ.**

